ಕನ್ನಡವೇ ಜಾತಿ ಕನ್ನಡವೇ ಧರ್ಮ ಕನ್ನಡವೇ ದೇವರು

# ಕರ್ನಾಟಕ ರಕ್ಷಣಾ ವೇದಿಕೆ



( ಕನ್ನಡಪರ ಸಂಘಟನೆಗಳ ಒಕ್ಕೂಟ) www.karnatakarakshanavedike.org

ನಂ.25, ಪ್ರವೀಣ್ ಕಟ್ಟಡ, 5ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು- 560 009.

## ಉತ್ತರ ಕನ್ನಡ ಜಿಲ್ಲಾ ಘಟಕ

**ಕರ್ನಾಟಕ ವಿರೋಧಿ " ಕೊಂಕಣಿರಾಜ್ಯ ಏಕೀಕರಣ ಮಂಚ್ " ಹಾಗೂ "ಕಾರವಾರ ಗೋಮಾಂತ ಮಂಚ್" ಸಂಘಟನೆಗಳ ನಿಷೇಧಕ್ಕೆ ಒತ್ತಾಯಿಸಿ ಬೃಹತ್ ಪ್ರತಿಭಟನಾ ರ್‍ಯಾಲಿ**

ದಿನಾಂಕ 12-7-2007ನೇ ಗುರುವಾರ ಸಮಯ : ಮಧ್ಯಾಹ್ನ 12-00ಕ್ಕೆ

ಮೆರವಣಿಗೆ ಹೊರಡುವ ಸ್ಥಳ :

**ಮಾಲಾದೇವಿ ಆಟದ ಮೈದಾನದಿಂದ ಜಿಲ್ಲಾಧಿಕಾರಿಗಳ ಕಛೇರಿವರೆಗೆ, ಕಾರವಾರ**

ಸಹೃದಯ ನಾಡ ಬಂಧುಗಳೇ,

ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ನಾಡಿನಾದ್ಯಂತ ಇರುವ ನಮ್ಮ ವೇದಿಕೆಯ ಲಕ್ಷಾಂತರ ಕಾರ್ಯಕರ್ತರು ಹೋರಾಟ-ಚಿಂತನೆಗಳ ಮೂಲಕ ದುಡಿಯುತ್ತಿರುವ ವಿಚಾರ ತಮಗೆ ತಿಳಿದಿರುವ ವಿಚಾರವಾಗಿದೆ.

ಭಾಷಾವಾರು ಪ್ರಾಂತ್ಯಗಳ ರಚನೆಯಾಗಿ ಐವತ್ತು ವರ್ಷಗಳು ಕಳೆದು ಕರ್ನಾಟಕ ಭೂಪಟ ಜನಜನಿತವಾಗಿರುವುದು ತಿಳಿದಿದ್ದರೂ ಸಹ ಕರ್ನಾಟಕ ಸಮಸ್ತ ಸವಲತ್ತುಗಳನ್ನು ಅನುಭವಿಸುತ್ತಾ ಬಂದಿರುವ ಗಡಿಭಾಗದ ಕೆಲವು ನಾಡದ್ರೋಹಿ ಸಂಘಟನೆಗಳು ನಾಡಿನ ಅಖಂಡತೆಗೆ ಭಂಗತರುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವುದಕ್ಕೆ ಉತ್ತರ ಕನ್ನಡ ಜಿಲ್ಲೆಯ ನಾಡದ್ರೋಹಿ ಸಂಘಟನೆಯಾದ 'ಕೊಂಕಣಿರಾಜ್ಯ ಏಕೀಕರಣ ಮಂಚ್' ಹಾಗೂ 'ಕಾರವಾರ ಗೋಮಾಂತ ಮಂಚ್' ಸಂಘಟನೆಗಳ ಕಾರ್ಯ ವೈಖರಿಯೇ ಸಾಕ್ಷಿಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ 'ಹಳಿಯಾಳ - ಕಾರಾವಾರ - ಜೋಯಿಡಾ' ತಾಲ್ಲೂಕುಗಳಲ್ಲಿ ಕೊಂಕಣಿ ಮಾತನಾಡುವ ಜನರಿದ್ದಾರೆಂಬ ನೆಪವೊಡ್ಡಿ ಕರ್ನಾಟಕ ಸರ್ಕಾರ ಈ ಭಾಗದ ಅಭಿವೃದ್ಧಿಯನ್ನು ನಿರ್ಲಕ್ಷಿಸಿದೆ ಎಂಬ ಕಾರಣನೀಡಿ ಮುಗ್ದ ಕೊಂಕಣಿ ಜನರಲ್ಲಿ ವಿಷಬೀಜ ಬಿತ್ತಿ 'ಸುಪ್ರೀಂಕೋರ್ಟಿಗೆ ' ಮಂಚ್‌ನ ನಾಯಕರು ಅರ್ಜಿ ಸಲ್ಲಿಸಿ ನಾಡದ್ರೋಹಿ ಕೆಲಸ ಮಾಡಿರುವುದು ಖಂಡನೀಯವಾದುದಾಗಿದೆ. ಆದುದರಿಂದ ನಮ್ಮ ವೇದಿಕೆಯ ಕಾರವಾರ ಜಿಲ್ಲಾ ಘಟಕವು ಕೆಳಕಂಡ ಪ್ರಮುಖ ಒತ್ತಾಯಗಳನ್ನು ಸರ್ಕಾರದ ಗಮನಕ್ಕೆ ತರುವುದರ ಮೂಲಕ ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಸಲುವಾಗಿ ಹೋರಾಟಕ್ಕೆ ಮುಂದಾಗಿದೆ.

### ನಮ್ಮ ರ್‍ಯಾಲಿಯ ಪ್ರಮುಖ ಒತ್ತಾಯಗಳು

1. ನಾಡದ್ರೋಹಿ 'ಕೊಂಕಣಿ ರಾಜ್ಯ ಏಕೀಕರಣ ಮಂಚ್' ಹಾಗೂ 'ಕಾರವಾರ ಗೋಮಾಂತ ಮಂಚ್ ' ಸಂಘಟನೆಗಳನ್ನು ಜಿಲ್ಲಾಧಿಕಾರಿಗಳು ನಿಷೇದ ಮಾಡಬೇಕು.
2. ಜಿಲ್ಲೆಯ ಅಭಿವೃದ್ಧಿಯನ್ನು ರಾಜ್ಯಸರ್ಕಾರ ಕಡೆಗಣಿಸಿದೆ ಎಂಬ ನೆಪವೊಡ್ಡಿ ಮುಗ್ದ ಕೊಂಕಣಿ ಜನರನ್ನು ದಿಕ್ಕು ತಪ್ಪಿಸುತ್ತಿರುವ ಮಂಚ್‌ನ ನಾಯಕರ ಮೇಲೆ ಸರ್ಕಾರ ನಿಗಾ ಇಡಬೇಕು.
3. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಗ್ರಾಮವಾಸ್ತವ್ಯವನ್ನು ಉತ್ತರ ಕನ್ನಡ ಜಿಲ್ಲೆಯ ಗಡಿಭಾಗದಲ್ಲಿ ನಡೆಸಿ ಇಲ್ಲಿನ ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು.
4. ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಉತ್ತರ ಕನ್ನಡ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಪ್ರಕಟಿಸಿ ಗಡಿಭಾಗದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ರಾಜ್ಯ ಸರ್ಕಾರ ಮುಂದಾಗಿ ಉತ್ತರ ಕನ್ನಡ ಜಿಲ್ಲೆಯ ಜನರ ಜೀವನ ಮಟ್ಟ ಸುಧಾರಣೆಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು.
5. ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ರಾಜಕೀಯ ಮುಖಂಡರು ಹಾಗೂ ಜನಪ್ರತಿನಿಧಿಗಳು ನಾಡಿನ ಅಖಂಡತೆಗೆ ಶ್ರಮಿಸಬೇಕು.

**ಸ್ವಾಭಿಮಾನಿ ಕನ್ನಡಿಗರೇ ಹೋರಾಟಕ್ಕೆ ಮುಂದಾಗಿ - ಉತ್ತರ ಕನ್ನಡ ಜಿಲ್ಲೆಯ ಉಳಿವಿಗೆ ಮುಂದಾಗಿ**

**ಟಿ.ಎ.ನಾರಾಯಣಗೌಡ**
ರಾಜ್ಯಾಧ್ಯಕ್ಷರು

**ಅಜಿತ್‌ಕುಮಾರ್**
ಅಧ್ಯಕ್ಷರು- ಉತ್ತರ ಕನ್ನಡ ಜಿಲ್ಲಾ ಘಟಕ